ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

ಸಂ: ಕಾಇಂ/ಲೋಇ/ವಿವಿಶಿ/ಸಇಂ-2/ಶಾ.ದೃ/2023-24/1420

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ
**ವಿಶೇಷ ವಿಭಾಗ,** ಶಿವಮೊಗ್ಗ ,
ದಿನಾಂಕ:- 22-09-2023

## " ಕಟ್ಟಡ ಸುರಕ್ಷತಾ ದೃಢೀಕರಣ ಪತ್ರ "

****

ಉಲ್ಲೇಖ : 1 ಸರ್ಕಾರದ ಸುತ್ತೋಲೆ ಸಂಖ್ಯೆ: ಲೋ.ಇ/59/ಬಿ.ಇಡಿ/2019 ದಿನಾಂಕ: 07-05-2022

2 ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ಉಪ ವಿಭಾಗ, ಶಿವಮೊಗ್ಗ ಇವರ ಕಛೇರಿ ಪತ್ರ ಸಂಖ್ಯೆ: 607/2023-24 ದಿನಾಂಕ:19-09-2023

ಶಾಲಾ ಸಂಚಾಲಕರು, ಮೌಂಟ್ ಕಾರ್ಮೆಲ್ ಶಾಲೆ, ವಿದ್ಯಾನಗರ, ಶಿವಮೊಗ್ಗ ಇವರು ಶಿವಮೊಗ್ಗದ ವಿದ್ಯಾನಗರದಲ್ಲಿರುವ ಮೌಂಟ್ ಕಾರ್ಮೆಲ್ ಶಾಲಾ ಕಟ್ಟಡದ ಸುರಕ್ಷತೆಯ ಪ್ರಮಾಣ ಪತ್ರ ನೀಡುವಂತೆ ಕೋರಿರುತ್ತಾರೆ.

ಮೌಂಟ್ ಕಾರ್ಮೆಲ್ ಶಾಲಾ ಕಟ್ಟಡಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರ ಸರ್ಕಾರದ ಆದೇಶದನ್ವಯ ಉಲ್ಲೇಖ (2)ರಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ಉಪವಿಭಾಗ, ಶಿವಮೊಗ್ಗ ಇವರು, ಶಾಲಾ ಕಟ್ಟಡ ನಿರ್ಮಾಣವಾಗಿ 5 ವರ್ಷದ ಒಳಗಿರುವುದೆಂದು ಹಾಗೂ Fire Safety Certificate ನ್ನು ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳು,ಶಿವಮೊಗ್ಗ ಇವರಿಂದ ಪಡೆದು ಸಲ್ಲಿಸಿದ್ದು, ದಿನಾಂಕ: 16-09-2023 ರಂದು ಸದರಿ ಕಟ್ಟಡವನ್ನು ಪರಿವೀಕ್ಷಣೆ ಮಾಡಲಾಗಿ ಮೇಲ್ನೋಟಕ್ಕೆ ಕಟ್ಟಡವು ಸುರಕ್ಷಿತವಾಗಿದೆ ಎಂಬ ಅಭಿಪ್ರಾಯವನ್ನು ತಿಳಿಸುತ್ತಾ ನಿಗಧಿತ ಶುಲ್ಕವನ್ನು ಪಾವತಿಸಿಕೊಂಡು ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಬಹುದಾಗಿದೆ ಎಂದು ವರದಿ ಮಾಡಿರುತ್ತಾರೆ.

ಆದ್ದರಿಂದ ಶಿವಮೊಗ್ಗದ ವಿದ್ಯಾನಗರದಲ್ಲಿರುವ ಮೌಂಟ್ ಕಾರ್ಮೆಲ್ ಶಾಲೆಯನ್ನು ಸದರಿ ಕಟ್ಟಡದಲ್ಲಿ ನಡೆಸಲು ಯೋಗ್ಯವಾಗಿದೆ ಎಂದು ದೃಢೀಕರಿಸಲಾಗಿದೆ. ಸದರಿ ದೃಢೀಕರಣವು ಮುಂದಿನ 1 ವರ್ಷಗಳವರೆಗೆ (ದಿನಾಂಕ: 21-09-2023 ರಿಂದ ದಿನಾಂಕ: 20-09-2024 ರವರೆಗೆ) ಸಿಂಧುವಾಗಿರುತ್ತದೆ. ಶಾಲೆ ನಡೆಸಲು ಕಟ್ಟಡಕ್ಕೆ ಅಗ್ನಿಶಾಮಕ, ವಿದ್ಯುತ್ ವ್ಯವಸ್ಥೆ ಸೇರಿದಂತೆ ಇನ್ನಿತರೆ ಮೂಲಭೂತ ಸೌಕರ್ಯ ಹಾಗೂ ಭದ್ರತಾ ಕ್ರಮಗಳು ಕಾಲೇಜು ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಸದರಿ ಕಟ್ಟಡದ ಸುರಕ್ಷತಾ ದೃಢೀಕರಣ ಪತ್ರವನ್ನು ತಮ್ಮ ಮನವಿಯ ಮೇರೆಗೆ ನೀಡಲಾಗಿರುತ್ತದೆ ಎಂದು ಈ ಮೂಲಕ ತಿಳಿಸಿದೆ.

(ಎಂ.ಸಂಪತ್ ಕುಮಾರ್ ಪಿಂಗ್ಳೆ)

**ಕಾರ್ಯಪಾಲಕ ಇಂಜಿನಿಯರ್,**
**ಲೋಕೋಪಯೋಗಿ ಇಲಾಖೆ,**
**ವಿಶೇಷ ವಿಭಾಗ, ಶಿವಮೊಗ್ಗ**

ಗೆ.

ಶಾಲಾ ಸಂಚಾಲಕರು,
ಮೌಂಟ್ ಕಾರ್ಮೆಲ್ ಶಾಲೆ,
ವಿದ್ಯಾನಗರ,
ಶಿವಮೊಗ್ಗ.

Scanned with CamScanner